ದಿನಾಂಕ: 14.01.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಬಿ ಜಿ ಆರ್ ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. 1985 ರಿಂದ 1988 ರವರೆಗೆ ಕೂಡ್ಲಹಳ್ಳಿ ಸರ್ಕಾರಿ ಶಾಲೆಯಲ್ಲಿ ಓದಿರುತ್ತೇನೆ ಎಂದರೆ ನಿಜ. ನಾನು 2 ರಿಂದ 3 ನೇ ತರಗತಿವರೆಗೆ ಓದಿರಬಹುದು. ನನಗೆ ಕನ್ನಡ ಓದಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಮ್ಮಕ್ಕ , ಪಂಚಣ್ಣ, ಕಮಲಮ್ಮ ಉಮಾದೇವಿ , ಪಿ ಆನಂದ ಎಂದು ಬರೆಸಿರುವ ವ್ಯಕ್ತಿಗಳು ವಾದಿಗಳು ಎಂದರೆ ನಿಜ. ವಾದಿಗಳು ಸಣ್ಣೇಗೌಡನ ಕಾನೂನು ಬದ್ಧ ವಾರಸುದಾರರು ಎಂದರೆ ಸಾಕ್ಷಿ ಹಿಂದೆ ವಾರಸುದಾರರು ಆಗಿದ್ದರು ಈಗ ವಿಭಾಗ ಆಗಿದೆ ಎಂದು ಹೇಳುತ್ತಾರೆ.

ಸಣ್ಣೇಗೌಡ ಮತ್ತು ಚಿಕ್ಕೇಗೌಡ ಯಾವ ದಾಖಲೆ ಮೂಲಕ ವಿಭಾಗವಾಗಿದ್ದಾರೆ ಎಂದರೆ ಸಾಕ್ಷಿ ಹಿಂದೆ ಭಾಗ ಆಗಿದ್ದಾರೆ ಅವರ ಜಮೀನು ಮಾರಾಟ ಮಾಡಿಕೊಂಡಿದ್ದಾರೆ ನಮ್ಮ ಜಮೀನುಗಳು ಇವೆ ಎಂದು ನುಡಿಯುತ್ತಾರೆ. ಜಮೀನು ಭಾಗ ಆದ ಬಗ್ಗೆ ದಾಖಲೆಗಳನ್ನು ಕೊಟ್ಟಿರುತ್ತೇನೆ. ಸಣ್ಣೇಗೌಡ ಮತ್ತು ಚಿಕ್ಕೇಗೌಡ ಇವರಿಗೆ ಭಾಗ ಆಗಿರುವ ಬಗ್ಗೆ ಮ್ಯುಟೇಷನ್ ಆಗಿರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನೀವು ಹಾಜರು ಪಡಿಸಿದ ನಿಡಿ-1 ರಿಂದ 84 ರ ದಾಖಲೆಗಳಲ್ಲಿ ಮ್ಯುಟೇಷನ್ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ.1 ರಿಂದ 12 ಪೌತಿ ವಾರಸು ಮೇಲೆ ಖಾತೆ ಪಹಣಿಗಳು ನಮ್ಮ ತಂದೆ ಹೆಸರಿಗೆ ನನ್ನ ದೊಡ್ಡಪ್ಪನ ಹೆಸರಿಗೆ ಆಗಿವೆ ಎಂದರೆ ನಿಜ. ಸದರಿ ಪೌತಿ ಖಾತೆಗಳು ಇಂದಿನವರೆಗೂ ಚಾಲ್ತಿಯಲ್ಲಿವೆ ಎಂದರೆ ಸಾಕ್ಷಿ ನಂತರ ಖರೀದಿ ಮಾಡಿದ ಆಸ್ತಿಗಳು ಆ ರೀತಿ ಬಂದಿದೆ ಎಂದು ಹೇಳುತ್ತಾರೆ. ಎಲ್ಲಾ ದಾವಾ ಸರ್ವೆ ನಂಬರ್ ಗಳು ಪೌತಿ ವಾರಸು ಮೂಲಕ ಮಾತ್ರ ಬಂದಿವೆ ಹೊರತು ಕ್ರಯ ಮೂಲಕ ವರ್ಗಾವಣೆಯಾಗಿವೆ ಎಂದರೆ ಸರಿಯಲ್ಲ.

ನಿಡಿ-10 ರಂತೆ 28.06.1991 ರಲ್ಲಿ ನಾವು ನನ್ನ ದೊಡ್ಡಪ್ಪನವರು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ . ಆ ವಿಭಾಗ ಪತ್ರದಲ್ಲಿ ವಾದಿಗಳು ಸೇರಿಕೊಂಡಿಲ್ಲ ಎಂದರೆ ನಿಜ.

ನಿಡಿ-10 ರಂತೆ ಖಾತೆ ಪಹಣಿಗಳು ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನ ಹೆಸರಿಗೆ ಬದಲಾವಣೆಯಾಗಿಲ್ಲ ಎಂದರೆ ಸರಿಯಲ್ಲ. ನಿಡಿ-10 ರಂತೆ ಕಾನೂನು ಬದ್ಧವಾಗಿ ಖಾತೆ ಪಹಣಿಗಳ ದಾಖಲೆಗಳು ವರ್ಗಾವಣೆಯಾಗಿಲ್ಲ ಎಂದರೆ ಸರಿಯಲ್ಲ.

ನಿಡಿ-7 ರಂತೆ 25.03.1996 ರಂದು ನಮ್ಮ ತಂದೆ ಮತ್ತು ನನ್ನ ದೊಡ್ಡಪ್ಪನ ಕುಟುಂಬದವರು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನಿಜ. ಸದರಿ ಪಾಲು ವಿಭಾಗದಲ್ಲಿ ವಾದಿಗಳು ಸೇರಿಕೊಂಡಿಲ್ಲ ಎಂದರೆ ನಿಜ. ನಿಡಿ-7 ರ ವಿಭಾಗ ಪತ್ರದಂತೆ ಖಾತೆ ಬದಲಾವಣೆಯಾಗಿಲ್ಲ ಎಂದರೆ ಸರಿಯಲ್ಲ.

ನಿಡಿ-2 ದಿಃ13.05.1930 ರ ಕ್ರಯ ಪತ್ರ ಸಣ್ಣೇಗೌಡನ ಮಗ ಚಿಕ್ಕೇಗೌಡನ ಹೆಸರಿಗೆ ಇದೆ ಎಂದರೆ ಸಾಕ್ಷಿ ಅದು ಚಿಕ್ಕೇಗೌಡನಿಗೆ ಸಂಬಂಧಪಟ್ಟಿದೆ ಎಂದು ನುಡಿಯುತ್ತಾರೆ. ಸದರಿ ಚಿಕ್ಕೇಗೌಡ ಗಿರಿಯಮ್ಮನಿಗೆ ಸಂತಾನವಿಲ್ಲ ಎಂದರೆ ನಿಜ. ಗಿರಿಯಮ್ಮನ ಗಂಡ ಚಿಕ್ಕೇಗೌಡನ ಅಣ್ಣನ ಹೆಸರೇ ಸಣ್ಣ ಪಾತೇಗೌಡ ಬಿನ್ ಲೇ ಸಣ್ಣೇಗೌಡ ಎಂದರೆ ನಿಜ. ಸಾಕ್ಷಿ ಮುಂದುವರೆದು ದತ್ತು ತೆಗೆದುಕೊಂಡ ನಂತರ ಸಂಬಂಧವಿಲ್ಲ ಭಾಗವಾಗಿದ್ದಾರೆ ಎಂದು ಹೇಳುತ್ತಾರೆ. ಸಣ್ಣಪಾತೇಗೌಡನ ಕೊನೆ ಮಗ ಚಿಕ್ಕಣ್ಣನನ್ನು ದತ್ತು ತೆಗೆದೆಕೊಂಡಿರುತ್ತಾರೆ. ದತ್ತುಮಗನಾದ ಚಿಕ್ಕಣ್ಣನ ಅಣ್ಣ ದೊಡ್ಡಪಾತೇಗೌಡ ಎಂದರೆ ನಿಜ.

ನಿಡಿ-2 ಆಸ್ತಿಯನ್ನು ಜಂಟಿ ಕುಟುಂಬದಲ್ಲಿದ್ದಾಗ ತೆಗೆದುಕೊಂಡ ಆಸ್ತಿ ಎಂದರೆ ಸರಿಯಲ್ಲ. ಪಟೇಲ್ ಚಿಕ್ಕೇಗೌಡ ಬಿನ್ ಸಣ್ಣಜ್ಜನ ಹೆಸರಿನಲ್ಲಿ ನಿಡಿ-3 ಮತ್ತು 4 ಇದೆ ಎಂದರೆ ಸಾಕ್ಷಿ ಚಿಕ್ಕೇಗೌಡನ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ. ಈ ಎರಡು ದಾಖಲೆಗಳು ಗಿರಿಯಮ್ಮನ ಗಂಡ ಚಿಕ್ಕೇಗೌಡ ಅವರ ಅಣ್ಣ ಪಾತೇಗೌಡನ ತಂದೆ ಪಟೇಲ್ ಚಿಕ್ಕೇಗೌಡನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಚಿಕ್ಕೇಗೌಡನ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ನಿಡಿ-3 ಮತ್ತು 4 ಗಿರಿಯಮ್ಮನ ಗಂಡ ಚಿಕ್ಕೇಗೌಡನಿಗೆ ಸಂಬಂಧಪಟ್ಟಿವೆ ಎಂದು ನುಡಿಯುತ್ತಾರೆ.

ಸಣ್ಣ ಪಾತೇಗೌಡನ ಮಗ ಕೆ ಪಾತೇಗೌಡ ಎಂದರೆ ವಾದಿಗಳಿಗೆ ಸಂಬಂಧಪಟ್ಟವರು . ನಿಡಿ-5 ಕ್ರಯ ಪತ್ರದಲ್ಲಿ ಚಿಕ್ಕೇಗೌಡನ ಮಗ ಚಿಕ್ಕಣ್ಣ ಎಂದರೆ ನನ್ನ ಮುತ್ತಾತ ಅವರು ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-5 ನಮ್ಮ ಮನೆಯಲ್ಲಿ ಇತ್ತು. ನಿಡಿ-5 ವಾದಿಗಳಿಗೆ ಸೇರಿದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಮಾರಿದ್ದರು ಎಂದು ನುಡಿಯುತ್ತಾರೆ. ಯಾವುದಾದರೂ ಜಮೀನು ಮಾರಾಟ ಮಾಡಿದರೆ ಅದರ ಮೂಲ ಪ್ರತಿಯನ್ನು ಖರೀದಿದಾರರು ಪಡೆದುಕೊಳ್ಳುತ್ತಾರೆ ಎಂದರೆ ನಿಜ.

ನಿಡಿ-6 ಸಣ್ಣ ಪಾತೇಗೌಡನ ಮಗ ಕೆ ಪಾತೇಗೌಡನಿಗೆ ಸೇರಿದೆ ಎಂದರೆ ಸಾಕ್ಷಿ ಅದು ಕೊಟ್ಟುಬಿಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-6 ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ನಿಡಿ-8 ರಲ್ಲಿ ಕಾಣಿಸಿರುವ ವಾದಿಗಳ ಮೂಲ ಪುರುಷ ಸಣ್ಣಪಾತೇಗೌಡ ತಿಮಣ್ಣನ ಮಗ ತಿಮ್ಮಣ್ಣನಿಗೆ ಮಾರಾಟ ಮಾಡಿದ ಕ್ರಯ ಪತ್ರವಾಗಿರುತ್ತದೆ.

ನಿಡಿ-9 ,1929-30 ರಲ್ಲಿ ಆಗಿದೆ ಎಂದರೆ ನಿಜ. ಸದರಿ ನಿಡಿ-9 ವಾದಿಗಳು ಪಾಲುವಿಭಾಗದ ನಂತರ ಅವರ ಪಾಲಿನ ಹಿಸ್ಸೆಯನ್ನು ಮಾರಿಕೊಂಡಂತಹ ಪತ್ರವಾಗಿರುತ್ತದೆ . 1929-30 ರಲ್ಲಿ ಯಾವುದೇ ಜಮೀನಿನ ಕಂದಾಯ ದಾಖಲೆಗಳು ಯಾವುದೇ ವ್ಯಕ್ತಿ ಹೆಸರಿನಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಡಿ-23 ದಾವಾ ಐಟಂ ನಂ.7 ಚಿಕ್ಕೇಗೌಡ ಬಿನ್ ಚಿಕ್ಕಗೌಡನ ಹೆಸರಿನಲ್ಲಿ 1971 ರವರೆಗೆ ಅವರ ಹೆಸರಿನಲ್ಲಿ ಇದೆ ಎಂದರೆ ನಿಜ. ನಿಡಿ-24 ದಾವಾ ಐಟಂ ನಂ.6 ಗಿರಿಯಮ್ಮನ ಗಂಡ ಚಿಕ್ಕೇಗೌಡನ ಹೆಸರಿಗೆ ಇದೆ ಎಂದರೆ ನಿಜ.

**<u>ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು